ಶ್ರೀ ಪಿ. ವೆಂಕಟಗಿರಿಯಪ್ಪ.—ಅಕ್ಕಿನಲ್ಲಿ ಅವಕಾಶ ಇರುವ ಪ್ರಕಾರ ಗಂಧದ ಮರಗಳನ್ನು ಕಡಿದುಕೊಂಡು ಹೋಗಿದ್ದರೂ ಕೂಡ ಪರಿಹಾರ ರೈತರಿಗೆ ಕೊಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಂಥಾದ್ದನ್ನು ಸರಕಾರದ ಗಮನಕ್ಕೆ ತಂದರೆ ಅವರಿಗೆ ಪರಿಹಾರ ಕೊಡಿಸುತ್ತೀರಾ ?

ಶ್ರೀ ಬಿ. ರಾಚಯ್ಯ.— ಗಮನಕ್ಕೆ ತಂದರೆ ಆ ಸಮಯದಲ್ಲಿ ನೋಡೋಣ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ರೈತರಿಗೆ ಕೂಡಲೇ ಪರಿಹಾರ ಒದಗಿಸಬೇಕು ಎಂದು ನಾವು ಅನೇಕ ಸಲ ಸರಕಾರಕ್ಕೆ ಸಲಹೆ ಮಾಡಿದ್ದೇವೆ. ಇದರ ಬಗ್ಗೆ ಸರಕಾರ ಏನು ಮಾಡಿದೆ ? ಇದುವರೆಗೆ ರೈತರಿಗೆ ಪರಿಹಾರ ಕೊಡದೇ ಇರುವ ಅಧಿಕಾರಿಗಳ ಮೇರೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಕಾನೂನು ಪ್ರಕಾರ ಯಾವ ರೀತಿ ಪರಿಹಾರ ಕೊಡಬೇಕೋ ಆ ರೀತಿ ಪರಿಹಾರ ಕೊಡುತ್ತಾ ಬಂದಿದೆ. ಹೊಸ ಆಕ್ಟ್ ಜಾರಿಗೆ ಬಂದ ನಂತರ ಅದರಲ್ಲಿ ಎಷ್ಟು ಪರಿಹಾರ ಬರುತ್ತದೆ ಎಂಬುದನ್ನು ನಮೂದಿಸಿರುತ್ತದೆ. ಅಷ್ಟು ಪರಿಹಾರ ಅವರಿಗೆ ಬರುತ್ತದೆ.

Electrification of Villages in Ron Taluk.

*Q.—210. Sri A. J. DODDAMETI (Ron).—

Will the Government be pleased to state :—

(*a*) when the plans and estimates for electrification of Hullur, Kotabala, Hirehal Villages in Ron Taluk in Dharwar District were sanctioned by the Mysore State Electricity Board ;

(*b*) whether it is a fact that the above work has not yet been undertaken ;

(*c*) if so, when it will be taken up and completed ?

A.—Sri G. B. SHANKAR RAO [Parliamentary Secretary to the Minister for Public Works].—

(*a*) On 17th June 1964.

(*b*) Yes.

(*c*) Arrangements have been made to take up the work on hand and will be completed as expeditiously as possible.

ಶ್ರೀ ಎ. ಜಿ. ದೊಡ್ಡಮೇಟಿ.—ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿರುವ ಈ ಮೂರು ಗ್ರಾಮಗಳ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಮಂಜೂರು ಆಗಿ ಎರಡು ವರ್ಷವಾಯಿತು, ಆದರೂ ಕೂಡ ಇನ್ನೂ ಕೆಲಸ ಪ್ರಾರಂಭವಾಗಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಜಿ. ಬಿ. ಶಂಕರರಾವ್.—ಈ ಎಸ್ಟಿಮೇಟು ಬದಲಾವಣೆಯಾದ ಮೂಲಕ ಕೆಲಸ ಪ್ರಾರಂಭ ಮಾಡುವುದು ಸ್ವಲ್ಪ ನಿಧಾನವಾಗಿದೆ.

Sri C. J. MUCKANNAPPA.—I want to know the position of the materials, whether you have got the materials to complete these works.

ಶ್ರೀ ಜಿ. ಬಿ. ಶಂಕರರಾವ್.—ಕೆಲಸ ಪ್ರಾರಂಭ ಮಾಡುವುದಕ್ಕೆ ಸಾಕಷ್ಟು ಮೆಟೀರಿಯಲ್ ಇದೆ. ಅದಕ್ಕೆ ಬೇಕಾಗುವಷ್ಟು ಮೆಟೀರಿಯಲ್ ಒದಗಿಸುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೆಲಸ ಪ್ರಾರಂಭ ಮಾಡುವುದಕ್ಕೆ ಬೇಕಾಗುವಷ್ಟೇ ಮೆಟೀರಿಯರ್ ಇದೆಯೇ ಅಥವಾ ಕೆಲಸ ಪೂರ್ತಿ ಮಾಡಲು ಬೇಕಾಗುವಷ್ಟು ಮೆಟೀರಿಯರ್ ಪೂರೈಸುವುದಕ್ಕೆ ಸಾಕಾಗುವಷ್ಟು ಮೆಟೀರಿಯರ್ ಇದೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಕೆಲಸ ಪ್ರಾರಂಭ ಮಾಡಿದ ನಂತರ ಪೂರ್ತಿಯಾಗುವುದಕ್ಕೆ ಕೆಲವು ದಿವಸ ಬೇಕಾಗುತ್ತದೆ. ಎಷ್ಟು ಸಾಮಾನು ಬೇಕಾಗುತ್ತದೆಯೋ ಅಷ್ಟನ್ನು ಕಾಲಕಾಲಕ್ಕೆ ಒದಗಿಸಲಾಗುತ್ತದೆ. ಕೆಲಸ ಮುಗಿಯುವುದಕ್ಕೆ ಬೇಕಾಗುವಷ್ಟು ಸಾಮಾನು ಒದಗಿಸಿರುತ್ತದೆ

Bridge across Cauvery River.

*Q.—271. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether it is not a fact that (i) the plan and estimate of a bridge across Cauvery river near Doddahanasoge was sanctioned and (ii) was included in the budget of the previous years 1962-63 and 1963-64 ;

(*b*) whether it is not a fact that the site of this bridge was changed from Doddahanasoge to Keralapura as per the technical opinion ;

(*c*) if so, whether the plan and estimate of the bridge across Cauvery near Keralapura has been sanctioned and included in the budget ?

*A.—Sri VEERENDRA PATIL (Minister for Public Works).—

(*a*) (i) Not sanctioned.

(ii) Included in the Budgets of the years 1962-63 and 1963-64, but without any specific provision during 1963-64.

(*b*) Yes.

(*c*) No.

Sri G. A. THIMMAPPA GOWDA.—Whether it is not a fact that a specific provision was made for this bridge during 1962-63 in the Budget, and an amount was also provided ?

Mr. SPEAKER.—In the answer, it is stated as 'included in the Budget, but without any specific provision during 1963-64'

Sri G. A. THIMMAPPA GOWDA.—I am asking for the year 1962-63.

Mr. SPEAKER.—The Member may please see the answer where it is stated that it was included in the Budgets of the years 1962-63 and 1963-64, but without any specific provision during the year 1963-64. Mere inclusion does not mean sanction. The information desired by the members is found there, for the question whether it was included in the Budget of 1962-63. In 1963-64, a number of things were put and a lumpsum provision was made.